

ಮೇಲಿಂದ ತನಗೆ ಬಿಸಾಡಬೇಕು, ಅದು ಬಿದ್ದದ್ದರಲ್ಲಿ ತನ್ನ ತಪ್ಪೇನು ಎನ್ನುವ ಪ್ರಶ್ನೆಗಳು ಎದ್ದದ್ದು, ಕೋಪ ಉಕ್ಕಿ ಬಂದದ್ದು, ಕೋಪದ ಹಿಂದೆಯೇ ಅವಮಾನ, ದುಃಖ ತನ್ನನ್ನು ಹಿಂಡಿದ್ದು ಈ ಎಲ್ಲವನ್ನೂ ಗೀತಾ ತಮ್ಮ ಆತ್ಮಕಥನದಲ್ಲಿ ಬರೆದುಕೊಂಡಿದ್ದಾರೆ.

ಹೆಣ್ಣಿನ ಜನುಮ ಮತ್ತು ಜಾತಿ ವ್ಯವಸ್ಥೆಯ ವಿಕಾರದ ಜೊತೆಗೆ ವರ್ಗ ವ್ಯವಸ್ಥೆಯ ಕ್ರೌರ್ಯ ಈ ಎಲ್ಲವೂ ಸಮುದಾಯದ ಬಹುಸಂಖ್ಯಾತರ ಬದುಕುಗಳನ್ನು ನಾಶವೇ ಮಾಡಿಬಿಡುವ ವಾಸ್ತವಗಳೇ ಗೀತಾ ಅವರ ಬರಹಗಳ ಮೂಲ ವಸ್ತು. ಅವರ ಬರವಣಿಗೆಯ ಇಷ್ಟೇ ಗಾಢವಾದ ಇನ್ನೊಂದು ನೆಲೆಯೆಂದರೆ, ಈ ಎಲ್ಲದರ ನಡುವೆಯೂ ದಲಿತರು, ಅದರಲ್ಲೂ ಮುಖ್ಯವಾಗಿ ಹೆಣ್ಣು ಬದುಕನ್ನು ನಿರಾಕರಿಸದೇ ಉತ್ಕಟವಾಗಿ ಬದುಕಲು ಸದಾ ತಹತಹಿಸುವುದು. ತನ್ನ ದೇಹದ ಮೇಲೂ ವ್ಯಕ್ತಿತ್ವದ ಮೇಲೂ ಅದೆಂಥ ಆಕ್ರಮಣಗಳಾದಾಗಲೂ ಅದನ್ನು ಮೆಟ್ಟಿ ನಿಂತು, ‘ಬದುಕೇ, ನನಗಿನ್ನೂ ಬದುಕಬೇಕಿದೆ, ಏನಾದರೂ ಕೊಡು, ನನಗೆ ಸಂತೋಷವಾಗುವುದನ್ನು, ನಾನು ಬಯಸುವುದನ್ನು’ ಎಂದು ಕೇಳುವ ಪಾತ್ರಗಳು ಗೀತಾ ಅವರಲ್ಲಿ ಅನೇಕ.

‘ಹಸಿ ಮಾಂಸ ಮತ್ತು ಹದ್ದುಗಳು’ ಗೀತಾ ಅವರಿಗೆ ಲೇಖಕಿಯಾಗಿ ಅಪಾರ ಜನಪ್ರಿಯತೆಯನ್ನು ತಂದುಕೊಟ್ಟ ಕೃತಿ. ತುಸು ಹಸಿ ಎಂತಲೇ ಅನ್ನಿಸುವ ಈ ಕೃತಿ ಗಂಡಿನ ಕ್ರೌರ್ಯವನ್ನು ಪರಿಣಾಮಕಾರಿಯಾಗಿ ತೋರಿಸುತ್ತದೆ. ಹೆಣ್ಣನ್ನು ದೇಹ ಮಾತ್ರವಾಗಿ, ಬಳಸಿ, ಬಿಸಾಡಬಹುದಾದ ಯಃಕಶ್ಚಿತ್ ಜೀವಿಯಾಗಿ ಫ್ಯೂಡಲ್ ವ್ಯವಸ್ಥೆ ಹೇಗೆ ನೋಡುತ್ತದೆ ಎನ್ನುವುದನ್ನು ಮುಖಕ್ಕೆ ರಾಚುವಂತೆ ಹೇಳುವ ಈ ಕಾದಂಬರಿ ತನ್ನ ಬಂಡಾಯದ ಗುಣದಿಂದ ಎಲ್ಲರ ಗಮನ ಸೆಳೆಯಿತು.

‘ಚಿಕ್ಕಿಯ ಹರೆಯದ ದಿನಗಳು’ ತನ್ನ ಲವಲವಿಕೆಯಿಂದ ಓದುಗರಿಗೆ ಪ್ರಿಯವಾಗುತ್ತದೆ. ‘ದಂಗೆ’ ಮತ್ತು ‘ಧುಮ್ಮಸ್ಸು’ ಇವರ ಇತರ ಮುಖ್ಯ ಕೃತಿಗಗಳು. ‘ಬದುಕು’ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವವನ್ನು ತಂದುಕೊಟ್ಟಿತು. ಆ ತನಕದ ಅವರ ಎಲ್ಲ ಬರವಣಿಗೆಯ ಪ್ರಾತಿನಿಧಿಕ ಕೃತಿಯಂತಿದೆ ಇದು. ವಿಸ್ತಾರ ಭಿತ್ತಿಯ ಈ ಕಾದಂಬರಿ ದಲಿತರಿಗೂ ಮಹಿಳೆಯರಿಗೂ ಮೇಲ್ಜಾತಿ ಮತ್ತು ಮೇಲ್ವರ್ಗದವರಿಗೂ ಬದುಕು ಬೇರೆಯೇ ಆಗಿರುತ್ತದೆ ಎನ್ನುವುದನ್ನು ಮನದಟ್ಟು ಮಾಡಿಸುತ್ತದೆ. ಆ ಬದುಕಿನ ಸಂಕಷ್ಟಗಳು ಮತ್ತು ಸಂಘರ್ಷಗಳ ಮೂಲವೇ ನಮ್ಮ ಜಾತಿ ಹಾಗೂ ಆರ್ಥಿಕ ವ್ಯವಸ್ಥೆ ಎನ್ನುವ ಸತ್ಯ ನಮ್ಮನ್ನು ಬೆಚ್ಚಿಬೀಳಿಸುತ್ತದೆ. ಆದ್ದರಿಂದಲೇ ಇದೊಂದು ನೈತಿಕ ಪ್ರಶ್ನೆಗಳನ್ನು ಎತ್ತುವ ಮಹತ್ವದ ಕಾದಂಬರಿ. ಈ ತುಂಬಲಾರದ ಕಂದಕಗಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಇನ್ನೂ ಬಲವಾಗಿ ಸ್ಥಾಪಿಸುವ ವಾಹಕಗಳಾಗುವ ದುರಂತವನ್ನೂ ಗೀತಾ ಈ ಕಾದಂಬರಿಯಲ್ಲಿ ಕಾಣಿಸುತ್ತಾರೆ.

ಕೈಯೊಡ್ಡಿ ಬೇಡಿಯೇ ಬದುಕಬೇಕಾದ ಸಾಮಾಜಿಕ ಕ್ರೌರ್ಯವನ್ನು ತಮ್ಮ ವಿದ್ಯೆ ಮತ್ತು ಉದ್ಯೋಗದಿಂದ ಗೆದ್ದ ಹೆಣ್ಣು ಗೀತಾ ನಾಗಭೂಷಣ. ಅವರ ವೈಯಕ್ತಿಕ ಬದುಕಿನ ಬಗ್ಗೆ ಮಾತನಾಡುವುದು ಅಧಿಕಪ್ರಸಂಗ ಮತ್ತು ಅನೈತಿಕ. ಆದರೆ, ಅವರ ಒಟ್ಟಾರೆ ಬದುಕು ಮತ್ತು ಅಸಾಮಾನ್ಯ ಧೈರ್ಯದಲ್ಲೂ ಗೀತಾ ಎದುರಿಸಿದ ಸವಾಲುಗಳನ್ನು ನಾವು ಹೇಗೆ ನೋಡಬೇಕು? ಯಾರನ್ನು ಬೇಕಾದರೂ ನಡುದಾರಿಯಲ್ಲಿ ಎದುರಿಸುವ ಛಾತಿಯ ಗೀತಾ, ನಡು ರಾತ್ರಿಯಲ್ಲಿ, ಹೊರಗೆ ಸ್ಕೂಟರಿನ ಶಬ್ದವಾದರೆ, ‘ಆತನೇ ಬಂದನೇನೋ, ಈ ರಾತ್ರಿಯಲ್ಲಿ ಇನ್ನೇನು ರಂಪವೋ, ಇನ್ನೇನು ಕಾದಿದೆಯೋ’ ಎಂದು ದಿಗಿಲುಗೊಳ್ಳುವುದು ಏನನ್ನು ಹೇಳುತ್ತದೆ? ಮಕ್ಕಳನ್ನು ಅವುಚಿಕೊಂಡು ಭಯದಲ್ಲೇ ಮಲಗುವ ಆ ರಾತ್ರಿಗಳನ್ನು ಅವರು ಕಳೆದದ್ದಕ್ಕೆ ಹೊಣೆ ಯಾರು? ಚರ್ಚೆ ಬೇಕಾದಷ್ಟು ಮಾಡಬಹುದು, ಆದರೆ, ಇಂಥ ರಾತ್ರಿಗಳನ್ನು ಈಗಲೂ ಅನೇಕ ಹೆಣ್ಣುಮಕ್ಕಳು ಕಳೆಯುತ್ತಿದ್ದಾರೆ ಎನ್ನುವುದು, ಮುಂದೆಯೂ ಅವರು ಕಳೆಯಬೇಕಾದ್ದರ ಸೂಚನೆ ಅಲ್ಲವೆ? ಇದು ‘ಹೆಣ್ಣಿನ ವಿಧಿ’ ಎನ್ನುವುದಾದರೆ, ಇದರ ಸೃಷ್ಟಿಕರ್ತನಾದ ಪಿತೃಸಂಸ್ಕೃತಿ ಈಗಲಾದರೂ ಉತ್ತರಿಸುವ ಹೊಣೆ ಹೊರಬೇಕು. ಇಂಥ ಸಂಸ್ಕೃತಿ ಗೀತಾ ಅವರನ್ನು ಬೇರೆ ಸಂದರ್ಭಗಳಲ್ಲೂ ತನಗೆ ಬೇಕಾದಂತೆ ಬಳಸಿಕೊಂಡಿದೆ. ಮಾಸ್ತಿಯವರ ಸಾಹಿತ್ಯವನ್ನು ಕುರಿತು ಗೀತಾ ಹೇಳಿದ ಹೇಳಿಕೆ (ಮಾಸ್ತಿ ಉಂಡ ಮನೆಯ ಗಳ ಎಣಿಸಿದವರು, ಅದಕ್ಕೇ ಅವರು ಚಿಕವೀರ ರಾಜೇಂದ್ರ ಮತ್ತು ಚೆನ್ನಬಸವನಾಯಕದಂತಹ ಕಾದಂಬರಿಗಳನ್ನು ಬರೆದರು) ಅವರ ಸ್ವಂತದ್ದೆಷ್ಟೋ ಅಷ್ಟೇ ಅವರನ್ನು ಸಾಂಸ್ಕೃತಿಕ ಹಾಗೂ ಸಾಹಿತ್ಯಕ ರಾಜಕಾರಣಗಳಿಗೆ ಬಳಸಿಕೊಂಡ ಮಹಾನುಭಾವರದ್ದೂ ಹೌದು.

ಗೀತಾ ಅವರನ್ನು ನಾನು ಕೊನೆಯ ಬಾರಿ ಕಂಡದ್ದು ಅವರಿಗೆ ‘ಕಟ್ಟೀಮನಿ ರಾಷ್ಟ್ರೀಯ ಪ್ರಶಸ್ತಿ’ ಬಂದಾಗ. ತಮ್ಮ ಎಂದಿನ ಉತ್ಸಾಹದಲ್ಲಿ ಗಾಢ ಬಣ್ಣದ ಸೀರೆ, ಅಷ್ಟೇ ಗಾಢ ಬಣ್ಣದ ಲಿಪ್‌ಸ್ಟಿಕ್ ಹಚ್ಚಿದ್ದ ಅವರು ನನ್ನನ್ನು ನೋಡಿದ್ದೇ, ‘ಯವ್ವಾ, ಚಲೋ ಬಣ್ಣದ್ದ ಒಂದು ಸೀರಿ ಉಡ್ಬಾರ್ದಿತ್ತೇನ’ ಎಂದದ್ದು ಈಗಲೂ ಕಿವಿಯಲ್ಲಿದೆ. ಅವರ ಕೆಲವು ಪುಸ್ತಕಗಳು ನನ್ನಲ್ಲಿ ಇಲ್ಲವೆಂದದ್ದಕ್ಕೆ, ಮರು ದಿನವೇ ಕೊರಿಯರ್ ಮಾಡಿದ್ದರು, ‘ಸೋದರಿ ಆಶಾದೇವಿಗೆ’ ಎಂದು ಬರೆದು.

ಹೌದು, ಗೀತಮ್ಮ, ನೀವು ನಮ್ಮೆಲ್ಲರ ಸಹೋದರಿ, **sisterhood is powerfull,** ಹೋಗಿಬನ್ನಿ, ಮಾಡಬೇಕಾದ ಕೆಲಸ ಮುಗಿಸಿಯೇ ಹೊರಟಿದ್ದೀರಿ.

ಪ್ರತಿಕ್ರಿಯಿಸಿ: **feedback@sudha.co.in**